**ವ್ಯಾಖ್ಯಾನ**

# ಆರು ಹಿತವರು ನಿಮಗೆ ಮೂರು ಮಂದಿಗಳೊಳಗೆ

**Ref.**: Haridasa Hrudaya, by Dr. A.B. Shamachar, published by Srimadwagrantha Prakashana, Bengaluru – 26 (2016), page No. 102.

**ಆರು ಹಿತವರು ನಿಮಗೆ ಮೂರು ಮಂದಿಗಳೊಳಗೆ ?**
**ನಾರಿಯೊ ಧಾರಿಣಿಯೊ ಬಲು ಧನದ ಸಿರಿಯೊ ? || ಪ ||**

**ಅನ್ಯರಲಿ ಜನಿಸಿರ್ದ ಅಂಗನೆಯ ಕರೆತಂದು**
**ತನ್ನ ಮನೆಗವಳ ಯಜಮಾನಿಯೆನಿಸಿ**
**ಭಿನ್ನವಲ್ಲದಲರ್ಧ ದೇಹವೆನಿಸುವ ಸತಿಯು**
**ಕಣ್ಣಿನಲಿ ನೋಡಲಮ್ಮಳು ಕಾಲವಶದಿ || 1 ||**

**ಮುನ್ನ ಶತಕೋಟಿ ರಾಯರುಗಳಾಳಿದ ನೆಲವ**
**ತನ್ನದೆಂದೆನುತ ಶಾಸನವ ಬರೆಸಿ**
**ಬಿನ್ನಣದ ಮನೆಕಟ್ಟಿ ಕೋಟೆ ಕೊತ್ತಳವಿಕ್ಕಿ**
**ಚೆನ್ನಿಗನಸುವಳಿಯೆ ಹೊರಗೆ ಹಾಕುವರು || 2 ||**

**ಉದ್ಯೋಗ ವ್ಯವಹರ ನೃಪಸೇವೆ ಕುಶಲಗತಿ**
**ಕ್ಷುದ್ರತನ ಕಳವು ಪರದ್ರೋಹದಿಂದ**
**ಬುದ್ಧಿಯಿಂದಲೆ ಗಳಿಸಿ ಸಿಕ್ಕಿದಂಥರ್ಥವನು**
**ಸದ್ಯದಲ್ಲಾರು ಉಂಬುವರು ಹೇಳು ಮನುಜ || 3 ||**

**ಶೋಕವನು ಗೈಯುವರು ಸತಿಸುತರು ಬಾಂಧವರು**
**ಜೋಕೆ ತಪ್ಪಿದ ಬಳಿಕ ಅರ್ಥ ವ್ಯರ್ಥ**
**ಲೋಕದೊಳು ಗಳಿಸಿರ್ದ ಪುಣ್ಯ ಪಾಪಗಳೆರಡು**
**ಸಾಕಾರವಾಗಿ ಸಂಗಡ ಬಾಹೋದಲ್ಲದೆ || 4 ||**

**ಅಸ್ಥಿರದ ದೇಹವನು ನೆಚ್ಚಿ ನಂಬಿರ ಬೇಡ**
**ಸ್ವಸ್ಥದಲಿ ನೆನೆ ಕಂಡ್ಯ ಹರಿ ಪಾದವ**
**ಚಿತ್ತದೊಳು ಶುದ್ಧಿಯಿಂ ಪುರಂದರವಿಠಲನೇ**
**ಉತ್ತಮೋತ್ತಮನೆಂದು ಸುಖಿಯಾಗು ಮನುಜ || 5 ||**

**ಆರು ಹಿತವರು**

ಶ್ರೀ ಪುರಂದರ ದಾಸರು ಜನರ ಅಜ್ಞಾನವನ್ನು ತೊಲಗಿಸಿ, ಸುಜ್ಞಾನವನ್ನು ಬೋಧಿಸಲೆಂದು ಅವತರಿಸಿ ಬಂದ ಮಹಾತ್ಮರು. ಸಂಸಾರದಲ್ಲಿ ಮುಳುಗಿದ ನಮಗೆ ಯಾವುದು ಸರಿ - ತಪ್ಪು ಎಂಬ ಅರಿವು ಸಾಲದು. ಹಿತ - ಅಹಿತಗಳ ವ್ಯತ್ಯಾಸವೂ ತಿಳಿಯದಾಗಿದೆ. ನಿತ್ಯ ಜೀವನದಲ್ಲಿ ನಮ್ಮೊಂದಿಗಿರುವ ಮುಖ್ಯವಾದ ವಸ್ತುಗಳ ಬಗ್ಗೆ ಪರಾಮರ್ಶಿಸಿ ಯಾವುದು ನಿಜಕ್ಕೂ ಸತ್ಯವೆಂಬುದನ್ನು ತಿಳಿಸುವರು.

**ಆರು ಹಿತವರು ನಿಮಗೆ ಮೂರು ಮಂದಿಯೊಳಗೆ ।**
**ನಾರಿಯೋ ಧಾರುಣಿಯೋ ಬಲುಧನದ ಸಿರಿಯೋ ॥**

ಇಲ್ಲಿ ದಾಸರು ಮೂರು ವಸ್ತುಗಳನ್ನು (ನಿತ್ಯ ನಮ್ಮೊಂದಿಗಿರುವ ವಸ್ತುಗಳು) ಬಳಸಿ ತುಲನಾತ್ಮಕ ಅಧ್ಯಯನ ನಡೆಸಿರುವರು. ಹೆಣ್ಣು - ಭೂಮಿ - ಸಂಪತ್ತು ಇವು ಯಾರಿಗೆ ಬೇಡ ? ಬೇಕು. ಆದರೆ ಎಷ್ಟರ ಮಟ್ಟಿಗೆ ಎಂಬುದು ಮುಖ್ಯ. ಒಂದೊಂದರ ಬಗ್ಗೆ ಸೊಗಸಾದ ಅಧ್ಯಯನ ನಡೆಸಿ ನಿತ್ಯ ತತ್ತ್ವವನ್ನು ಬೋಧಿಸುವರು. **"ಇರಬೇಕು – ಇಲ್ಲದಿರಬೇಕು .... "** ಎಂದಂತೆ ಅವಶ್ಯವಾದಷ್ಟಿದ್ದು ಅದರ ಅಭಿಮಾನವನ್ನು ತ್ಯಜಿಸಬೇಕೆನ್ನುವರು.

ಬೇರೆ ಮನೆಯಿಂದ ಬಂದ ಹೆಣ್ಣನ್ನು ಮದುವೆಯಾಗಿ ಎಲ್ಲವನ್ನೂ ಧಾರೆಯೆರೆಯುವ. ರಾಣಿಯನ್ನಾಗಿಸುವ. ಅರ್ಧಾಂಗಿಯನ್ನಾಗಿ ಪ್ರೀತಿಸಿ ಮೆರೆಸುವ. ಆದರೆ ಅವನು ಸತ್ತಾಗ ಜೊತೆ ಬಾರಳು. ಹೆಣವನ್ನೂ ನೋಡಲು ಇಚ್ಛಿಸಳು. ಇಂಥ ನಾರಿ ಹಿತವಳೇ ? ಎನ್ನುವರು. ಅದಕ್ಕೆ ಒಂದು ಕಡೆ **'ಸತಿಸುತರಿರಬೇಕು ಅತಿ ಮೋಹ ಬಿಡಬೇಕು'** ಎಂದದ್ದು. ರಾಜ ಮಹಾರಾಜರು ಸೆಣದಾಡಿ - ಹೋರಾಡಿ ಗಳಿಸಿದ ನೆಲ ಸಿಂಹಾಸನಾದಿಗಳು, ತಮ್ಮವೆಂದು ಶಾಸನ ಬರೆಸುವರು. ಆದರೇನು ಸತ್ತರೆ ಇವು ಯಾವುವೂ ಹಿಂದೆ ಬಾರವು. ಇವನನ್ನೇ ಹೊರಹಾಕುವರು. ಅದಕ್ಕೆ ದಾಸರೆಂದರು **'ನೆಚ್ಚದಿರು ಈ ಭಾಗ್ಯ ಸ್ಥಿರವಲ್ಲ'** ಎಂದು. ಇನ್ನು ಕಪಟ ವಂಚನೆಗಳಿಂದ ಗಳಿಸಿದ ಧನಾದಿ ಸಂಪತ್ತು ಅಥವಾ ಆಧ್ಯಾತ್ಮ ವಿದ್ಯೆ ಬಿಟ್ಟು ಶ್ರಮಿಸಿ ಗಳಿಸಿದ ಸಂಪತ್ತು ಕಳವಾದರೆ - ನಷ್ಟವಾದರೆ, ಗತಿಯೇನು ? ಅಥವಾ ಕೂಡಿಟ್ಟರೂ ಉಂಬವರು ಅನ್ಯರೆ ಅಲ್ಲವೆ ? ಈ ಮೂರನ್ನು ಪಡೆಯುವ ಮುನ್ನ ಯೋಚಿಸಿ ಎನ್ನುವರು**.** **'ಜೊತೆ ತಪ್ಪಿದ ಬಳಿಕ ಅರ್ಥ ವ್ಯರ್ಥ'** ಎನ್ನುವರು.

ದಾಸರು ಇದಕ್ಕೆಲ್ಲಾ ಉತ್ತರವಾಗಿ ಆಡಿದ ಮಾತು

**ಅಸ್ಥಿರದ ದೇಹವನು ನೆಚ್ಚಿ ನಂಬಿರ ಬೇಡ**
**ಸ್ವಸ್ಥದಲಿ ನೆನೆ ಕಂಡ್ಯ ಹರಿ ಪಾದವ**
**ಚಿತ್ತದೊಳು ಶುದ್ಧಿಯಿಂ ಪುರಂದರ ವಿಠಲನೇ**
**ಉತ್ತಮೋತ್ತಮನೆಂದು ಸುಖಿಯಾಗು ಮನುಜ ॥**

ಸ್ಥಿರವಲ್ಲದುದನ್ನು ಮೋಹಿಸಿ ಕೆಡದಿರು ಎಂದರು. ಸ್ಥಿರವಾದ ನಿತ್ಯ ಸುಖ ಶಾಂತಿ ನೀಡುವ ಶ್ರೀಹರಿಯ ನೆನೆ ಕಂಡ್ಯ ಮನುಜ ಎಂದು, ಅವನೇ ಸರ್ವಸ್ವವೆಂದು ಭಜಿಸೆಂದು ಹಿತನುಡಿದರು.

* * * * * *

**ಲೇಖಕರು:** Dr. A. B. ಶಾಮಾಚಾರ್, ಬೆಂಗಳೂರು (ಲೇಖಕರ ಅನುಮಾನತಿಯೊಂದಿಗೆ).